ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001.**

ಸಂಖ್ಯೆ:ಸಿ7[2]ಪ್ರಾಶಿಅ:ಖರೀದಿ/07/2020–21 ದಿನಾಂಕ:08ನೇ ಜೂನ್ 2020

**: ಸು ತ್ತೋ ಲೆ :**

ವಿಷಯ: ಖಾಸಗಿ ಶಾಲೆಗಳಲ್ಲಿ ಕೋವಿಡ್–19ರ ಹಿನ್ನೆಲೆಯಲ್ಲಿ ಮಾಸ್ಕ್ ಮತ್ತು ಇತರೆ ಸಲಕರಣೆಗಳನ್ನು ನಿರ್ಧಿಷ್ಟಪಡಿಸಿದ ಸ್ಥಳದಲ್ಲಿಯೇ ಖರೀದಿ ಮಾಡಲು ಒತ್ತಾಯ ಮಾಡುತ್ತಿರುವ ಬಗ್ಗೆ.

ಉಲ್ಲೇಖ: ದೂರ ದರ್ಶನ ಪತ್ರಿಕೆ ಹಾಗೂ ಇತರೆ ಮಾಧ್ಯಮಗಳಲ್ಲಿ ವರದಿಯಾಗಿರುವ ಮಾಹಿತಿಯಾದರಿಸಿ.

*& & & & &*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಖಾಸಗಿ ಶಾಲೆಗಳು ಕೇಂದ್ರ ಪಠ್ಯಕ್ರಮ ಮತ್ತು ರಾಜ್ಯ ಪಠ್ಯಕ್ರಮದಲ್ಲಿ ಬೋಧನೆ ಮಾಡುತ್ತಿದ್ದು, ಕೆಲವು ಶಾಲೆಗಳು ಪಠ್ಯಪುಸ್ತಕ, ಸಮವಸ್ತ್ರ, ಶೂ–ಸಾಕ್ಸ್, ಶಾಲಾ ಬ್ಯಾಗ್, ಇವುಗಳನ್ನು ನಿರ್ಧಿಷ್ಟಪಡಿಸಿದ ಮಾರಾಟಗಾರರಿಂದಲೇ ಖರೀದಿಸಬೇಕೆಂದು ಪೋಷಕರನ್ನು ಒತ್ತಾಯ ಪಡಿಸುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ದೂರುಗಳು ಬಂದಿರುತ್ತದೆ. ಈ ಬಗ್ಗೆ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಪೋಷಕರಿಗೆ ನಿರ್ಧಿಷ್ಟ ಖರೀದಿದಾರರಿಂದ ಖರೀದಿಸಲು ಒತ್ತಾಯಿಸಬಾರದೆಂದು ಈಗಾಗಲೇ ಅನೇಕ ಬಾರಿ ಸೂಚಿಸಲಾಗಿರುತ್ತದೆ.

**ಕೋವಿಡ್–19ರ ಹಿನ್ನೆಲೆಯಲ್ಲಿ ರಾಜ್ಯದ ಕೆಲವು ಶಾಲೆಗಳು ಮಾಸ್ಕ್, ಹ್ಯಾಂಡ್ ಗ್ಲೌಸ್ ಮತ್ತು ಸ್ಯಾನಿಟೈಸರ್ ಇವುಗಳನ್ನು ಸಹ ಶಾಲಾ ಆಡಳಿತ ಮಂಡಳಿಯ ಸೂಚಿಸಿರುವ ಖರೀದಿದಾರರಿಂದಲೇ ಖರೀದಿಸಬೇಕೆಂಬ ಒತ್ತಾಯವನ್ನು ಮಾಡುತ್ತಿರುವುದು ಹಾಗೂ ಶಾಲೆಗಳೇ ಅವುಗಳನ್ನು ಮಾರಾಟ ಮಾಡುತ್ತಿರುವುದು ಮಾಧ್ಯಮಗಳಲ್ಲಿ ಬಿತ್ತರವಾಗಿರುತ್ತದೆ.**

ಶಿಕ್ಷಣ ಕಾಯ್ದೆಯ The Karnataka Educational Institutions [Classification, Regulation and Prescription of Curricula Etc.,] Rules–1995ರ ನಿಯಮ 11[3]ರಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಪಠ್ಯಪುಸ್ತಕ, ಸಮವಸ್ತ್ರ, ಶೈಕ್ಷಣಿಕ ಚಟುವಟಿಕೆಗಳ ಅಗತ್ಯ ಸಾಮಗ್ರಿಗಳನ್ನು ಖರೀದಿಸಲು ಪೋಷಕರು ಸ್ವತಂತ್ರರಾಗಿರುತ್ತಾರೆ ಎಂದು ಪ್ರಸ್ತಾಪಿಸಲಾಗಿದೆ.

ರಾಜ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:21375–21380/2017ರ ತೀರ್ಪಿನಲ್ಲಿಯೂ ಸಹ ಯಾವುದೇ ಆಡಳಿತ ಮಂಡಳಿಗಳು ಶಾಲೆಯಲ್ಲಿ ಪುಸ್ತಕ, ಸಮವಸ್ತ್ರ, ಲೇಖನ ಸಾಮಗ್ರಿಗಳು ಶೂ–ಸಾಕ್ಸ್, ಶಾಲಾ ಬ್ಯಾಗ್ ಇವುಗಳನ್ನು ಮಾರಾಟ ಮಾಡದಂತೆ ಆದೇಶ ನೀಡಿದೆ.

ಆದ್ದರಿಂದ ಶಾಲೆಗಳಲ್ಲಿ ಕೋವಿಡ್-19ಗೆ ಸಂಬಂಧಿಸಿದಂತೆ ಮಾಸ್ಕ್ ಮತ್ತು ಸ್ಯಾನಿಟೈಸರ್ ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡುವಂತಿಲ್ಲ ಹಾಗೂ ನಿರ್ದಿಷ್ಟ ಮಾರಾಟಗಾರರಿಂದ ಖರೀದಿ ಮಾಡಲು ಒತ್ತಾಯಿಸುವಂತಿಲ್ಲ.

ಖಾಸಗಿ ಶಾಲೆಗಳ ಆಡಳಿತ ಮಂಡಳಿಯು ತಮ್ಮ ಶಾಲೆಯಲ್ಲಿ ಮೇಲೆ ತಿಳಿಸಿರುವ ವಸ್ತುಗಳನ್ನು ಮಾರಾಟ ಮಾಡಿದಲ್ಲಿ / ನಿರ್ದಿಷ್ಟ ಮಾರಾಟಗಾರದಿಂದ ಖರೀದಿ ಮಾಡಲು ಒತ್ತಾಯಿಸಿದಲ್ಲಿ ಶಿಕ್ಷಣ ಕಾಯ್ದೆ ನಿಯಮಗಳಲ್ಲಿ ತಿಳಿಸಿರುವಂತೆ ಇಂತಹ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ. ಆದ್ದರಿಂದ ಯಾವುದೇ ಖಾಸಗಿ ಆಡಳಿತ ಮಂಡಳಿಗಳು / ಶಾಲೆಗಳು ಪೋಷಕರನ್ನು ಒತ್ತಾಯಿಸಬಾರದೆಂದು ಮತ್ತೊಮ್ಮೆ ಸೂಚಿಸಿದೆ. ಆಡಳಿತ ಮಂಡಳಿಗಳು / ಶಾಲೆಗಳು ಶಾಲಾ ಮಕ್ಕಳಿಗೆ ಉಚಿತವಾಗಿ ವಿತರಿಸಲು ಸ್ವತಂತ್ರರಾಗಿರುತ್ತಾರೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಉಪನಿರ್ದೇಶಕರು [ಆಡಳಿತ], ಈ ಬಗ್ಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ, ಪೋಷಕರಿಂದ ದೂರುಗಳು ಬಂದ ತಕ್ಷಣವೇ ಅಂತಹ ಶಾಲೆಗಳ ವಿರುದ್ದ ಶಿಕ್ಷಣ ಕಾಯ್ದೆಯಡಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ:

01. ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ] ಇವರಿಗೆ ಸೂಕ್ತ ಕ್ರಮಕ್ಕಾಗಿ.
02. ರಾಜ್ಯದ ಎಲ್ಲ ತಾಲ್ಲೂಕು / ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
03. ರಾಜ್ಯದ ಎಲ್ಲಾ ಅನುದಾನರಹಿತ ಶಾಲಾ ಆಡಳಿತ ಮಂಡಳಿ / ಪ್ರಾಂಶುಪಾಲರು / ಮುಖ್ಯೋಪಾದ್ಯಾಯರಿಗೆ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಮುಖಾಂತರ

ಪ್ರತಿಯನ್ನು:

04. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಇವರಿಗೆ.
05. ಕಛೇರಿ ಪ್ರತಿ.